೧–೦೦ ಪಿ. ಎಂ.

2) ಅಡಿಸೊನ್ನೆಟ್ಟಿ ಗ್ರಾಮದಲ್ಲಿ ಸರ್ಕಾರದವರು ತೋಡಿರುವ ಕೊಳವೆ ಬಾವಿಯನ್ನು ಭೂ ಮಾಲೀಕ ಸ್ವಂತ ಲಾಭಕ್ಕೆ ಉಪಯೋಗಿಸಿ ಕೊಳ್ಳುತ್ತಿರುವುದು,

ಶ್ರೀ ಬಿ. ಗಂಗಣ್ಣ.—(ಸದಸ್ಯರು ಹಾಜರಿಲ್ಲ)

ಶ್ರೀ ಎಂ. ಪಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ನನ್ನ ಮತದಾರ ಕ್ಷೇತ್ರದ ಅಡಿಸೊನ್ನೆಟ್ಟಿ ಎಂಬ ಗ್ರಾಮದಲ್ಲಿ ಸಾರ್ವಜನಿಕರ ಬಹುಕಾಲದ ಬೇಡಿಕೆಯಾದ ಕುಡಿಯುವ ನೀರಿನ ಬಗ್ಗೆ ಒಂದು ಕೊಳವೆ ಬಾವಿಯನ್ನು ಆರು ತಿಂಗಳ ಹಿಂದೆ ಕೊರೆಯಲಾಗಿತ್ತು. ಆಸುಪಾಸಿನ ಜನರಿಗೆ ಅದರಿಂದ ತುಂಬಾ ಅನುಕೂಲವಾಗಿತ್ತು. ಅವರ ನೀರಿನ ಬವಣೆ ನೀಗಿದ ಸಂತೋಷದಲ್ಲಿರುವಾಗ ಈಗ ಆ ಕೊಳವೆ ಬಾವಿಯ ಸಮೀಪದ ಜಾಗದ ಭೂ ಮಾಲೀಕರೊಬ್ಬರು ಆ ಕೊಳವೆ ಬಾವಿಯನ್ನು ತನ್ನ ಸ್ವಂತದೆಂದು ಹೇಳಿ ಸಾರ್ವಜನಿಕರಿಗೆ ನೀರನ್ನು ಉಪಯೋಗಿಸಲು ಅಡೆತಡೆ ಉಂಟು ಮಾಡಿದ್ದಲ್ಲದೆ ತನ್ನ ಸ್ವಂತ ಉಪಯೋಗಕ್ಕಾಗಿ ಪಂಪುಸೆಟ್ಟನ್ನು ಹಾಕಲು ಉದ್ದೇಶಿಸಿರುತ್ತಾರೆ. ಆದ್ದರಿಂದ ಸರ್ಕಾರದವರು ಈ ಕುರಿತಂ ಸೂಕ್ತ ತನಿಕೆ ನಡೆಸಿ ಸಾರ್ವಜನಿಕರಿಗಾಗಿ ಸರ್ಕಾರ ತೋಡಿಸಿದ ಈ ಕೊಳವೆ ಬಾವಿಯ ಉಪಯೋಗ ಅವರಿಗೆ ಸಿಗುವಂತೆ ನೋಡಿಕೊಳ್ಳಬೇಕಾಗಿಯೂ, ಯಾರೇ ಆಗಲಿ ಸ್ವಂತ ಲಾಭಕ್ಕೆ ಬಳಸಿಕೊಳ್ಳದಂತೆ ನೋಡಿಕೊಳ್ಳಬೇಕಾಗಿಯೂ ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಆನೇಕಲ್ ತಾಲ್ಲೂಕಿನ ಅಡಿಸೊನ್ನೆಟ್ಟಿ ಎಂಬ ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಒಂದು ಕೊಳವೆ ಬಾವಿಯನ್ನು ಕೊರೆದಿದ್ದು ಸಮೀಪದ ಭೂಮಾಲೀಕರೊಬ್ಬರು ಅದು ತಮ್ಮ ಸ್ವಂತ ಜಾಗದಲ್ಲಿರುವುದೆಂದು ಸಾರ್ವಜನಿಕರಿಗೆ ತೊಂದರೆಯುಂಟು ಮಾಡಿದ್ದಾರೆ ಎಂಬುದಾಗಿ ಮಾನ್ಯ ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಇದನ್ನು ಪರಿಶೀಲಿಸಲಾಗಿ, ಈ ಕೊಳವೆ ಬಾವಿಯನ್ನು ಗ್ರಾಮದ ಪೂರ್ವಭಾಗದಲ್ಲಿ ಸುಮಾರು ೧೫೦ ಅಡಿ ದೂರದಲ್ಲಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ನಿರ್ಮಿಸಿರುವ ರಸ್ತೆಯ ಮಗ್ಗುಲಲ್ಲಿ ದಿನಾಂಕ ೧೭–೭–೧೯೬೭ ರಂದು ಬರ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕೊರೆಯಲಾಗಿದೆ. ಈ ಕೊಳವೆ ಬಾವಿಯ ಆಳ ೫೦.೨೯ ಮೀಟರುಗಳು. ಇಳುವರಿ ಗಂಟೆಗೆ ಸುಮಾರು ೫೦೦ ಗ್ಯಾಲನ್ನುಗಳು (೨೫೭೦೦ ಲೀಟರುಗಳು). ಇದಕ್ಕೆ ಕೈಪಂಪನ್ನು ಅಳವಡಿಸಿ ಈ ಬಾವಿಯು ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಆ ಊರಿನ ಜನರು ಕುಡಿಯುವ ನೀರನ್ನು ಈ ಕೊಳವೆ ಬಾವಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಬಾವಿಯನ್ನು ಕೊರೆದ ದಿನ ಊರಿನ ಜನರು ಯಾರು ತಮ್ಮ ಸ್ವಂತ ಜಾಗ ಎಂದು ಅಡ್ಡಿ ಮಾಡಿಲ್ಲ. ಮಾನ್ಯ ಸದಸ್ಯರು ತಿಳಿಸಿರುವ ಹಾಗೆ ಈಚಾಗೆ ಪಕ್ಕದ ಜಮೀನಿನವರೊಬ್ಬರು ಅತಿಕ್ರಮಣ ಮಾಡಿ ಬಾವಿಯ ನೀರನ್ನು ಉಪಯೋಗಿಸಲು ಸಾರ್ವಜನಿಕರಿಗೆ ಅಡ್ಡಿ ಮಾಡುತ್ತಿದ್ದಾರೆ ಎಂಬ ವಿಷಯ ಈಗ ತಿಳಿದುಬಂದಿದೆ. ಇದನ್ನು ಪೂರ್ಣ ಪರಿಶೀಲನೆ ಮಾಡಿಸಿ ಕಾನೂನು ರೀತಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಸದ್ಯದಲ್ಲಿ ಊರಿನ ಜನರಿಗೆ ಕುಡಿಯುವ ನೀರಿಗೆ ತೊಂದರೆ ಇಲ್ಲ.

3) ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಥಾಪಿಸಲ್ಪಟ್ಟ ಚೆಕ್‌ಪೋಸ್ಟ್‌ಗಳಲ್ಲಿ ರೈತರು ಬೆಳೆದ ಆಹಾರ ಪದಾರ್ಥಗಳಿಗೆ ಮಾರಾಟ ದಂಡ ವಿಧಿಸುತ್ತಿರುವುದು.

ಶ್ರೀ ಕೆ. ಕುಶಲ.—(ಸದಸ್ಯರು ಹಾಜರಿಲ್ಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಥಾಪಿಸಲ್ಪಟ್ಟಿರುವ ಚೆಕ್‌ಪೋಸ್ಟುಗಳಲ್ಲಿ ಚೆಕ್‌ಪೋಸ್ಟಿನ ಆಕ್ಕಪಕ್ಕದ ರೈತರು ತಾವು ಸ್ವತ: ಬೆಳೆದ ಆಹಾರಪದಾರ್ಥಗಳನ್ನು ಮಾರಾಟ ಮಾಡಲು ಸಾಗಿಸುವಾಗ ಚೆಕ್‌ಪೋಸ್ಟ್‌ನಲ್ಲಿ ತಡೆಹಿಡಿದು ದಂಡವಿಧಿಸುವುದು, ಲಂಚ ಕೇಳುವುದು ಇತ್ಯಾದಿ ಕಿರುಕುಳಗಳು ಜಾಸ್ತಿಯಾಗಿ ನಡೆಯುತ್ತಿದೆ. ಇದರಿಂದ

ಇಡೀ ರೈತ ಜನುಂಗಕ್ಕೆ ಬಹಳ ಕಷ್ಟ ಸಂಭವಿಸಿದೆ. ಇದು ಸಾರ್ವಜನಿಕ ಮಹತ್ವದ ಜರೂರು ವಿಷಯವಾದ್ದರಿಂದ ಸದನದಲ್ಲಿ ಇದನ್ನು ಪ್ರಸ್ತಾಪ ಮಾಡಬಯಸುತ್ತೇನೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕಳ್ಳವ್ಯಾಪಾರಿಗಳಿಂದ ಮಾರಾಟ ತೆರಿಗೆ ಕದಿಯುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮವು ೧೯೫೭ರ ಉಪಬಂಧದ ಪ್ರಕಾರ ರಾಜ್ಯದ ಸೂಕ್ತ ಸ್ಥಳಗಳಲ್ಲಿ ಶೋಧನಾ ಠಾಣೆಗಳನ್ನು (ಸೇಲ್ಸ್ ಟ್ಯಾಕ್ಸ್ ಚೆಕ್ ಪೋಸ್ಟ್) ನಿರ್ಮಿಸಲಾಗಿದೆ.

೨. ಮಾರಾಟ ತೆರಿಗೆ ಕಾನೂನಿನ ಪ್ರಕಾರ ಸರಕು ಸಾರಿಗೆ ವಾಹನಗಳಲ್ಲಿ ಒಯ್ಯುತ್ತಿರುವ ಸರಕುಗಳಿಗೆ ಸಂಬಂಧಿಸಿದಂತೆ ವಿಕ್ರಿ ಬಿಲ್ಲು (ಸೇಲ್ಸ್ ಬಿಲ್ಲು) ಆಗಲೀ ಆಥವಾ ಇಲಾಖೆಯಿಂದ ಪಡೆದ ನಮೂನೆ-೩೫ರ ಡೆಲಿವರಿ ನೋಟ್ (ಫಾರ್ಮ ೩೫ ಡೆಲಿವರಿ ನೋಟ್) ಇರಬೇಕು ಹಾಗೂ ಇಂತಹ ಬಿಲ್ ಆಥವಾ ಡೆಲಿವರಿ ನೋಟಿನ ಒಂದು ಪ್ರತಿಯನ್ನು ಶೋಧನಾ ಠಾಣೆಯಲ್ಲಿ ಸಲ್ಲಿಸಬೇಕು ಎಂಬ ಕಾನೂನು ಇದೆ. ಈ ನಿಬಂಧನೆಯನ್ನು ಪಾಲಿಸದಿದ್ದರೆ ಶೋಧನಾ ಠಾಣೆಯ ಅಧಿಕಾರಿ ದಂಡ ವಿಧಿಸಬಹುದು, ಒಂದು ಸಮಯ ಸರಕನ್ನು ಸಾಗಿಸುವವರು ವರ್ತಕರಲ್ಲದ ಪಕ್ಷದಲ್ಲಿ. ಅಂತಹವರನ್ನು ದಂಡಿಸಬಾರದೆಂಬ ಕ್ರಮವಿದೆ.

೩. ಸ್ವಂತ ಬೇಸಾಯದಿಂದ ಬೆಳೆದ ಬೆಳೆಯನ್ನು ಸಾಗಿಸುವ ರೈತರು ಮಾರಾಟ ತೆರಿಗೆಯ 'ವರ್ತಕರು' (ಡೀಲರ್) ಎಂಬ ವಾಖ್ಯೆಯಲ್ಲಿ ಬರುವುದಿಲ್ಲ. ಆದ್ದರಿಂದ ರೈತರು ತಾವು ಬೆಳೆದ ಮಾಲನ್ನು ಸಾಗಿಸುವಾಗ, ಅದು ಹಾಗೆಂದು ತೋರಿಸಲು ಆಯಾ ಊರಿನ ಗ್ರಾಮ ಲೆಕ್ಕಿಗರ ಪ್ರಮಾಣ ಪತ್ರ ತೋರಿಸುವ ವಾಡಿಕೆ ಇದೆ. ಈ ಕ್ರಮವನ್ನು ಪಾಲಿಸಿದಾಗ ಸಾಗಾಣಿಕೆಯಲ್ಲಿರುವ ಮಾಲು ರೈತರ ದೆಂದು ಖಾತ್ರಿಯಾಗಿ ಶೋಧನಾ ಠಾಣೆಯ ಅಧಿಕಾರಿ ಅಂತಹ ಸರಕು ಸಾರಿಗೆ ವಾಹನವನ್ನು ನಿರಾತಂಕವಾಗಿ ಹೋಗಲು ಬಿಡುತ್ತಾರೆ.

೪. ಆದರೆ ಅನೇಕ ಕಳ್ಳ ವರ್ತಕರು ತಾವೇ ರೈತರ ಬಾಗಿಲಿಗೆ ಹೋಗಿ ಅವರ ಮಾಲನ್ನು ಖರೀದಿಸಿ ಸ್ವಂತವಾಗಿ ಸಾಗಿಸುತ್ತಿದ್ದರೂ ತೆರಿಗೆ ತೆರುವುದನ್ನು ತಪ್ಪಿಸಲು ರೈತರ ಮಾಲೆಂಬ ಸಬೂಬು ಹೇಳಿ ಪಾರಾಗಲು ಪ್ರಯತ್ನಿಸಿದ ಅನೇಕ ಪ್ರಸಂಗಗಳು ವಾಣಿಜ್ಯ ತೆರಿಗೆ ಇಲಾಖೆಯ ಗಮನಕ್ಕೆ ಬಂದಿದೆ. ಉದಾಹರಣೆ : ಬ್ಯಾಡಗಿ ಪ್ರದೇಶದಿಂದ ಮುಂಬಾಯಿಗೆ ಒಣ ಮೆಣಸಿನಕಾಯಿ, ಬಳ್ಳಾರಿ ಜಿಲ್ಲೆಯಿಂದ ಆಂಧ್ರಕ್ಕೆ ಹತ್ತಿ, ಮೈಸೂರು ಜಿಲ್ಲೆಯ ಕೆಲವು ತಾಲ್ಲೂಕುಗಳಿಂದ ತಮಿಳುನಾಡಿಗೆ ಹತ್ತಿ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಿಂದ ಮಹಾರಾಷ್ಟ್ರಕ್ಕೆ ಕಬ್ಬು, ಬೀದರ್ ಪ್ರದೇಶದಿಂದ ಮಹಾರಾಷ್ಟ್ರಕ್ಕೆ ದ್ವಿದಳ ಧಾನ್ಯಗಳು ಇತ್ಯಾದಿ.

೫. ಆದ್ದರಿಂದ ಶೋಧನಾ ಠಾಣೆಯಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ಒಕ್ಕಲುತನ ಹುಟ್ಟುವಳಿಯ ಸರಕಿನ ಸಾಗಾಣಿಕೆ ಕಂಡು ಬಂದಲ್ಲಿ ಅದು ರೈತರದೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಲು ಬಹಳ ಎಚ್ಚರಿಕೆಯಿಂದ ವಿಚಾರಿಸುತ್ತಾರೆ ಮತ್ತು ಆ ಬಗ್ಗೆ ನಿಖರವಾದ ಪ್ರಮಾಣ ಹಾಗೂ ದಾಖಲೆಯನ್ನು ನೋಡುತ್ತಾರೆ. ಇದರ ವಿನಾ ಮಾರಾಟಕರ ಶೋಧನಾ ಠಾಣೆಗಳಿಗೂ ಹಾಗೂ ರೈತರಿಗೂ ಯಾವುದೇ ಸಂಬಂಧ ಬೇಳುವುದಿಲ್ಲ. ಕೆಲವು ಸಲ ಅಪ್ರಾಮಾಣಿಕ ವರ್ತಕರು ಇಂತಹ ಜಾಗರೂಕ ವಿಚಾರಣೆಯನ್ನು ಕೆಡಿಸಲು ರೈತರ ಹೆಸರು ಹೇಳಿ ವಿನಾ ಕಾರಣ ಗಲಾಟೆ ಮಾಡಿದ್ದುಂಟು. ಳಿ ರಾಜ್ಯ ರಸ್ತೆ ಸಾರಿಗೆ ಬಸ್ಸಿನಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಸ್ಥಳದ ವ್ಯವಸ್ಥೆಯಿಲ್ಲವೆಂದೂ ವುದು.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಮಹಿಳಾ ಪ್ರಯಾಣಿಕರು ಸಂಚಾರ ಮಾಡುವಾಗ ಮುಳ್ಳಿನ ಮೇಲೆ ಕೂತಂತೆ ಅನುಭವ. ಸ್ತ್ರೀಯರಿಗೆ ಪ್ರತ್ಯೇಕ ಸ್ಥಳದ ಏರ್ಪಾಡು ಇಲ್ಲ. ಎಲ್ಲೆಂದರಲ್ಲಿ ಕುಳಿತು ಎಲ್ಲ ಕುಚೋದ್ಯವನ್ನು ಸಂಗಿಕೊಂಡು ಪಯಣಿಸಬೇಕು. ದುಡಿಯುವ ಮಹಿಳೆಯರಂತೂ ಹೊಟ್ಟೆಪಾಡಿಗಾಗಿ ಎಷ್ಟೇ ಕಷ್ಟಪಟ್ಟರೂ ಬಸ್ಸಿನಲ್ಲಿ ಹೋಗಲೇಬೇಕಾದ ಪ್ರಸಂಗ ಜೊತೆಗೆ ಮುಖಕ್ಕೆ ಹೊಗೆ ಉಗುಳುವ ಧೂಮಪಾನಿಗಳ ಗೋಳು ಧೂಮಪಾನ ನಿಷೇಧದ ನಾಮಫಲಕ ಬರೀ ಕಾನೂನಿನ ಪುಸ್ತಕದ ಪಾಲನೆಗೆ ಇರುವಂಥಾದ್ದು ಹೊರತು, ವ್ಯವಹಾರಿಕ ಆಚರಣೆಗಲ್ಲ. ಬಿ.ಟಿ.ಎಸ್. ಬಸ್‌ಗಳಲ್ಲಿ ಪ್ರತ್ಯೇಕ ಸ್ಥಳ ಮಹಿಳೆಯರಿಗೆಂದು ಕಾದಿಸುವ ಬೋರ್ಡು ಇದ್ದರೂ ಅದನ್ನು ಪಾಲಿಸುತ್ತಿಲ್ಲ. ಕೇರಳ, ತಮಿಳುನಾಡುಗಳಲ್ಲಿ ಪ್ರತ್ಯೇಕ ಸ್ಥಳದ ವ್ಯವಸ್ಥೆ